# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಶ್ರೀ ರಾಮಕೃಷ್ಣ, ಅಭಿವೃದ್ಧಿ ಆಯುಕರ ಸಿಬ್ಬಂದಿ ಶಾಖೆಯ ಅಧಿಕಾರಿ, ಹಿಂದಿನ ಉಪಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಲಿ ಯೋಜನಾ ನಿರ್ದೇಶಕರು, ಬೀದರ ಇವರ ಅಘೋಷಿತ ಬಲ್ಲ ಆದಾಯ ಮೂಲಗಳಿಂತ ಹೆಚ್ಚಿಗೆ ಹೊಂದಿರಬಹುದಾದ ಆಸ್ತಿ ವಿವರಗಳನ್ನು ಪತ್ತೆ ಹಚ್ಚಲು ಅಗತ್ಯ ತನಿಖೆ ಕೈಗೊಳ್ಳುವ ಸಲುವಾಗಿ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸುವ ಬಗ್ಗೆ.

ಓದಲಾಗಿದೆ:1. ಆಂತರೀಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು (ದಿನಾಂಕ ಇಲ್ಲ) ಸಲ್ಲಿಸಿರುವ ಪ್ರಾಥಮಿಕ ವರದಿ.

2. ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 217 ಸೇಲೋಯು 2016 ದಿನಾಂಕ: 24-08-2016.

------

ಪ್ರಸ್ತಾವನೆ:

ಶ್ರೀ ರಾಮಕೃಷ್ಣ, ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಅಧಿಕಾರಿ, ಹಿಂದಿನ ಉಪಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಲಿ ಯೋಜನಾ ನಿರ್ದೇಶಕರು, ಬೀದರ ಇವರು ತಮ್ಮ ಕುಟುಂಬದ ಹಾಗೂ ಬೇನಾಮಿ ವ್ಯಕ್ತಿಗಳ ಹೆಸರಿನಲ್ಲಿ ಅತಿ ಹೆಚ್ಚಿನ ಆಸ್ತಿಯನ್ನು ಅಂದರೆ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಕುದೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ 2 ಬಡಾವಣೆಗಳನ್ನು ನಿರ್ಮಿಸಿರುವ ಬಗ್ಗೆ, ಶ್ರೀ ರಾಮಕೃಷ್ಣ ಇವರ ಪತ್ನಿ ಶ್ರೀಮತಿ ಗಿರಿಜಾ ರಾಮಕೃಷ್ಣ ಹಾಗೂ ಶ್ರೀ ಎಂ. ನಾಗೇಶ ಇವರ ಜಂಟಿ ಹೆಸರಿನಲ್ಲಿ 120 ನಿವೇಶನಗಳನ್ನು ಹೊಂದಿರುವ ಬಗ್ಗೆ ಇತ್ಯಾದಿ ಕುರಿತು ಸ್ವೀಕೃತವಾದ ಮಾಹಿತಿಯ ಅನುಸಾರ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರೀಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ ಇವರನ್ನು ಕೋರಲಾಗಿದ್ದು, ಅದರಂತೆ ಸದರಿಯವರು ಲಭ್ಯವಿರುವ ಮಾಹಿತಿ/ದಾಖಲೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡುಬಂದಿರುವ ಬಗ್ಗೆ ತಿಳಿಸಿರುತ್ತಾರೆ:-

1. ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕುದೂರು ಗ್ರಾಮದ ಸರ್ವೆ ನಂ. 45/1 ರಲ್ಲಿ ಎಂ. ಗಿರಿಜಾ ರಾಮಕೃಷ್ಣ ರವರು ಮತ್ತು ಶ್ರೀ ಎಂ. ನಾಗೇಶ ಇವರ ಜಂಟಿ ಖಾತೆಯಲ್ಲಿ ಒಟ್ಟು 12.08 ಎಕರೆ ಜಮೀನು ಇದ್ದು, ಸದರಿ ಜಮೀನಿನಲ್ಲಿ ಬಡಾವಣೆ ನಿರ್ಮಿಸಿ ಜಂಟಿ ಮಾಲೀಕತ್ವದಲ್ಲಿ 120 ನಿವೇಶನಗಳನ್ನು ನಿರ್ಮಿಸಿರುತ್ತಾರೆ.
2. ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕುದೂರು ಗ್ರಾಮದ ವ್ಯಾಪ್ತಿಯಲ್ಲಿ ಶ್ರೀಮತಿ ಗಿರಿಜಾ ರಾಮಕೃಷ್ಣ ಇವರ ಹೆಸರಿನಲ್ಲಿ ಸರ್ವೆ ನಂ. 46 ಹಿಸ್ಸಾ 3 ರಲ್ಲಿ 1 ಎಕರೆ ಜಮೀನು ಹಾಗೂ ಹಿಸ್ಸಾ 6 ರಲ್ಲಿ 0.30 ಎಕರೆ ಶ್ರೀಮತಿ ಗಿರಿಜಾ ರಾಮಕೃಷ್ಣ ಇವರ ಹೆಸರಿನಲ್ಲಿರುತ್ತದೆ.
3. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಚಿಕ್ಕಗುಬ್ಬಿ ಗ್ರಾಮದ ಸರ್ವೆ ನಂ. 56 ರಲ್ಲಿ ಶ್ರೀಮತಿ ಗಿರಿಜಾ ರಾಮಕೃಷ್ಣ ಇವರ ಹೆಸರಿನಲ್ಲಿ 1 ಎಕರೆ ಮತ್ತು ಎಂ. ಗಿರಿಜಾ ರಾಮಕೃಷ್ಣ ಕೊಂ ರಾಮಕೃಷ್ಣ ಇವರ ಹೆಸರಿನಲ್ಲಿ 2 ಎಕರೆ. ಸದರಿ ಜಮೀನಿನಲ್ಲಿ ಬಡಾವಣೆ ನಿರ್ಮಿಸಲಾಗಿದೆ.

ಮೇಲ್ಕಂಡ ವಿವರಗಳಲ್ಲಿ ಕಾಣಿಸಿರುವ ಶ್ರೀಮತಿ ಗಿರಿಜಾ ರಾಮಕೃಷ್ಣ ಇವರು ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಅಧಿಕಾರಿಯಾದ ಶ್ರೀ ರಾಮಕೃಷ್ಣ ಇವರ ಪತ್ನಿಯಾಗಿರುತ್ತಾರೆ. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 23ರ ಅನುಸಾರ ಪ್ರತಿಯೊಬ್ಬ ಸರ್ಕಾರಿ ನೌಕರರು ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಚರಾಸ್ತಿ/ಸ್ಥಿರಾಸ್ತಿಗಳ ವಿವರಗಳು, ಅವುಗಳನ್ನು ಅರ್ಜಿಸಿದ ಬಗ್ಗೆ ಹಾಗೂ ಅವುಗಳು ಯಾರ ಹೆಸರಿನಲ್ಲಿರುತ್ತವೆ ಎಂಬ ಸಂಪೂರ್ಣ ಮಾಹಿತಿ/ವಿವರಗಳನ್ನು

ಸಕ್ಷಮ ಪ್ರಾಧಿಕಾರಕ್ಕೆ ನಿಗಧಿತ ನಮೂನೆಯಲ್ಲಿ ಪ್ರತಿ ವರ್ಷವು ಮಾರ್ಚ ಅಂತ್ಯಕ್ಕೆ ಕೊನೆಗೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸದರಿ ನಿಯಮಗಳ ನಿಯಮ 23(2)ರ ಅನುಸಾರ ಸರ್ಕಾರಿ ನೌಕರರು ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಅರ್ಜಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

ಶ್ರೀ ರಾಮಕೃಷ್ಣ, ಹಿಂದಿನ ಉಪಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಲಿ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಬೀದರ್ ಇವರು ಮೇಲೆ ತಿಳಿಸಿರುವ ನಿಯಮಗಳ ಅನುಸಾರ ತಮ್ಮ ಪತ್ನಿಯವರ ಹೆಸರಿನಲ್ಲಿ ಮೇಲೆ ತಿಳಿಸಿರುವಂತೆ ಸ್ಥಿರಾಸ್ತಿಯನ್ನು ಹೊಂದಿರುವ ಬಗ್ಗೆ ಯಾವುದೇ ವಿವರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ಅಲ್ಲದೆ ಸದರಿ ಅಧಿಕಾರಿಯವರು 2008–09ನೇ ಸಾಲಿನಿಂದ 2013–14ನೇ ಸಾಲಿನವರೆಗೆನ ವಾರ್ಷಿಕ ಆಸ್ತಿ/ದಾಯಿತ್ವಗಳ ಮಾಹಿತಿಯನ್ನು ಕಾಲ ಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸದೆ ಇದ್ದುದ್ದರಿಂದ, ಸರ್ಕಾರವು ಸದರಿಯವರಿಗೆ ದಿನಾಂಕ: 09-04-2013 ರಂದು ಪತ್ರ ಬರೆದು ಸೂಚಿಸಿದ ನಂತರ ಒಂದೆ ಬಾರಿಗೆ ದಿನಾಂಕ: 18-10-2014 ರಂದು ಸದರಿ ಸಾಲುಗಳ ಆಸ್ತಿ/ದಾಯಿತ್ವ ಪಟ್ಟಿಗಳನ್ನು ಸಲ್ಲಿಸಿರುತ್ತಾರೆ. ಹಾಲಿ ಸಕ್ಷಮ ಪ್ರಾಧಿಕಾರದ ಬಳಿ ಲಭ್ಯವಿರುವ ಮಾಹಿತಿ/ದಾಖಲೆಗಳ ಅನುಸಾರ ಶ್ರೀ ರಾಮಕೃಷ್ಣ ಇವರ ಪತ್ನಿ ಶ್ರೀಮತಿ ಗಿರಿಜಾ ರಾಮಕೃಷ್ಣ ಇವರು ಸ್ವಂತ ಆದಾಯವನ್ನು ಹೊಂದಿರುವ ಬಗ್ಗೆ ಅಥವಾ ಅವರು ಸ್ಥಿರಾಸ್ತಿಯನ್ನು ಅರ್ಜಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿರುವುದಿಲ್ಲ.

ಮುಂದುವರೆದು ಶ್ರೀ ರಾಮಕೃಷ್ಣ ಇವರು ತಮ್ಮ ಹಾಗೂ ತಮ್ಮ ಪತ್ನಿಯವರ ಹೆಸರಿನಲ್ಲಿ ಸ್ವಂತ ಮನೆಗಳನ್ನು ಹೊಂದಿದ್ದರು ಸಹ ಸರ್ಕಾರಿ ವಸತಿ ಗೃಹದಲ್ಲಿ ವಾಸವಾಗಿರುತ್ತಾರೆ. ಹಾಗಾಗಿ ಸದರಿಯವರು ವಸತಿ ಗೃಹ ಹಂಚಿಕೆ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.

ಪ್ರಾಥಮಿಕ ಪರಿಶೀಲನೆಯಿಂದ ಕಂಡುಬರುವಂತೆ ಶ್ರೀ ರಾಮಕೃಷ್ಣ, ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಬೀದರ ಇವರು ತಮ್ಮ ಪತ್ನಿಯವರ ಹೆಸರಿನಲ್ಲಿ ಬೃಹತ್ ಪ್ರಮಾಣದ ಸ್ಥಿರಾಸ್ತಿ ಅರ್ಜಿಸಿರುವುದು, ಸದರಿಯವರು ಖರೀದಿಸಿದ ಜಮೀನಿನಲ್ಲಿ ಬಡಾವಣೆ/ನಿವೇಶನ ರಚಿಸಿ ಮಾರಾಟ ಮಾಡುವ ಬಗ್ಗೆ ಶ್ರೀ ಎಂ. ನಾಗೇಶ ತಂದೆ ಮುನಿ ನಾರಾಯಣಪ್ಪ, ಶ್ರೀ ಪವನಕುಮಾರ ಡೆವಲಪರ್ಸ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ಕಂಡುಬಂದಿದ್ದು, ಇದೊಂದು ಗಂಬೀರ ಸ್ವರೂಪದ ದುರ್ನಡತೆ ಆಗಿರುತ್ತದೆ. ಅಲ್ಲದೆ, ಶ್ರೀ ರಾಮಕೃಷ್ಣ ಇವರು ಈ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೆ ಮರೆಮಾಚಿರುವುದರಿಂದ ಸದರಿಯವರು ತಮ್ಮ ಬಲ್ಲ ಮೂಲಗಳ ಆದಾಯದ ಹೊರತಾಗಿ ಅಕ್ರಮವಾಗಿ ಸಂಪಾದಿಸಿರುವ ಸಾಧ್ಯತೆ ಕಂಡುಬರುತ್ತದೆ.

ಪ್ರಾಥಮಿಕ ಪರಿಶೀಲನೆಯಿಂದ ಸಾಕಷ್ಟು ಅಘೋಷಿತ ಸ್ಥಿರಾಸ್ತಿಯನ್ನು ಶ್ರೀ ರಾಮಕೃಷ್ಣ ಇವರ ಪತ್ನಿ ಶ್ರೀಮತಿ ಗಿರಿಜಾ ರಾಮಕೃಷ್ಣ ಇವರು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಇನ್ನೂ ಹೆಚ್ಚಿನ ಸ್ಥಿರಾಸ್ತಿ/ಚರಾಸ್ತಿಯನ್ನು ಹೊಂದಿರುವ ಸಾಧ್ಯತೆ ಇರುವುದರಿಂದ ಈ ಕುರಿತಂತೆ ಸಮಗ್ರ ತನಿಖೆ ನಡೆಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ, ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 174 ವಿಸೇಬಿ 2016 ಬೆಂಗಳೂರು ದಿನಾಂಕ:23-09-2016**

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ರಾಮಕೃಷ್ಣ, ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಅಧಿಕಾರಿ, ಹಿಂದಿನ ಉಪಕಾರ್ಯದರ್ಶಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ (ಹಾಲಿ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಬೀದರ್) ಹಾಗೂ ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಸ್ಥಿರಾಸ್ತಿಗಳ ಮೇಲೆ ಹೂಡಿಕೆ ಮಾಡಲಾಗಿರುವ ಮೊತ್ತ ಈ ಅವಧಿಯಲ್ಲಿ ಬಂದಿದ್ದ ಆದಾಯ ಹಾಗೂ ಮೇಲೆ ತಿಳಿಸಿರುವ ಸ್ಥಿರಾಸ್ತಿಗಳಲ್ಲದೆ ಬೇರೆ ಸ್ಥಿರಾಸ್ಥಿಗಳನ್ನು ಹೊಂದಿರುವರೇ ಎಂಬುದರ ಬಗ್ಗೆ ಸಮಗ್ರವಾದ ತನಿಖೆ ನಡೆಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಜಾಗೃತ ವಿಭಾಗದ

ಸುತ್ತೋಲೆ ಸಂಖ್ಯೆ: ಸಿಆಸುಇ 217 ಸೇಲೋಯು 2016 ದಿನಾಂಕ: 24-08-2016 ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯಡಿಯಲ್ಲಿ ತನಿಖೆ ನಡೆಸಲು ಸದರಿ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸಲು ತೀರ್ಮಾನಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/9/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.(ಸೇ-ಬಿ &ಸಿ.)

ಗೆ:
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಪೋಲೀಸ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಖನಿಜ ಭವನ, ಬೆಂಗಳೂರು.
3. ಆಯುಕ್ತರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ, ರಾಮನಗರ ಜಿಲ್ಲೆ.
6. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕುದೂರು ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರತಿಗಳು ಮಾಹಿತಿಗಾಗಿ :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ.
3. ಜಂಟಿ ಕಾರ್ಯದರ್ಶಿ(ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆಪ್ತ ಸಹಾಯಕರಿಗೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, (ಸೇವೆಗಳು-ಎ ಮತ್ತು ಸಮನ್ವಯ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.